ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ನ ರಾ ಪುರ.

ಸಿ ಸಿ ನಂ.275/2020

D.W.1

| | | |
|---|---|---|
| ಸಾಕ್ಷಿದಾರರ ಹೆಸರು | - | ಸಂತೋಷ್ |
| ತಂದೆಯ ಹೆಸರು | - | ಬಲವಯ್ಯ |
| ವಯಸ್ಸು | - | 44 ವರ್ಷ |
| ಉದ್ಯೋಗ | - | ಪತ್ರಿಕೋಧ್ಯಮದಲ್ಲಿ ಕೆಲಸ |
| ವಾಸ ಸ್ಥಳ | - | ಮಾಯಾಕೊಂಡ, ಹರಿಹರ ತಾಲ್ಲೂಕು |

ದಿನಾಂಕಃ 06.01.2022 ರಂದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಆರೋಪಿಯ ಪರ ಮಾನ್ಯ ಶ್ರೀ ಎಚ್ ಎಂ ಬಿ ವಕೀಲರಿಂದ:</u>

ನಾನು ಪತ್ರಿಕಾ ರಂಗದಲ್ಲಿ ಕೆಲಸ ಮಾಡುತ್ತಿರುವಾಗ, ನನಗೆ ರೇಣುಕಾಚಾರಿ ಎಂಬುವವರ ಪರಿಚಯ ಆಗಿದ್ದು, ಮಹೇಶ್ ಎಂಬುವವರ ಕಡೆಯಿಂದ ಪರುಷರಾಮ್ ಎನ್ನುವವರು ಮೋಸ ಹೋಗಿದ್ದು, ಅವರು ನನಗೆ ಈ ಬಗ್ಗೆ ನ್ಯಾಯಾ ಕೊಡಿಸುವಂತೆ ತಿಳಿಸಿರುತ್ತಾರೆ. ನಂತರ ನಾನು ರೇಣುಕಾಚಾರಿ ರವರ ಜೊತೆ ದೂರವಾಣಿ ಕರೆ ಮಾಡುತ್ತಾ ನಮ್ಮ ಇಬ್ಬರ ಪರಿಚಯ ಆಗಿರುತ್ತದೆ. ಮಹೇಶ್ ರವರ ಬಳಿ ಇದ್ದ ಹಳೇ ವಸ್ತುವನ್ನು ನಾನು ತೆಗೆದುಕೊಳ್ಳುತ್ತೇನೆಂದು ಫೋನ್ ಮುಖಾಂತರ ನಂಬಿಸಿರುತ್ತೇನೆ. ಆಗ ಅವರು ಬೆಳ್ಳೂರು ಕ್ರಾಸ್ ಗೆ ಬರುವಂತೆ ತಿಳಿಸಿದ್ದು, ನಾನು, ಪರುಷರಾಮ್, ದೇವಪ್ಪ, ಬ್ಯಾಪ್ಪ ಹೋಗಿರುತ್ತೇವೆ. ಮಹೇಶ್ ರವರು ನಮಗೆ ವಸ್ತುವನ್ನು ಕೊಡಲು ನಿರಾಕರಿಸಿದ್ದು ನಾವು ಅಲ್ಲಿಂದ ವಾಪಸ್ಸು ಬಂದಿರುತ್ತೇವೆ. ನಂತರ ನಾನು ನನ್ನ ಮೊಬೈಲ್ ನಿಂದ ಮಹೇಶ್ ರವರ 2 ನೇ ಮಗಳ ಮೊಬೈಲ್ ಗೆ ಕೆಲವು ವಿಡಿಯೋಗಳನ್ನು ಕಳುಹಿಸಿರುತ್ತೇನೆ. ನಂತರ ಮಹೇಶ್ ರವರಿಗೆ ಅವರ ಬಳಿ ಇರುವ ಹಳೇ ವಸ್ತುಗಳನ್ನು ನಮಗೆ ವಿಡಿಯೋ ಮಾಡಿ ಕಳುಹಿಸುವಂತೆ ಹೇಳಿದ್ದು, ಅವರು ಅದರಂತೆ ವಿಡಿಯೋ ಮಾಡಿ ನಮಗೆ ಕಳುಹಿಸಿರುತ್ತಾರೆ. ನಂತರ ಅವಾಗ ಮಹೇಶ್ ರವರಿಗೆ ನಂಬಿಕೆ ಬಂದು ಅವರು ನಮ್ಮನ್ನು ಕರೆದಿದ್ದು ನಾವು ಬೆಳ್ಳೂರು ಕ್ರಾಸ್ ಗೆ ಹೋಗಿರುತ್ತೇವೆ. ಅಲ್ಲಿ ಮಹೇಶ್ ರವರು ಅವರ ಬೈಕ್ ನಲ್ಲಿ ನನ್ನ ಹಾಗೂ ಪರುಷರಾಮ್ ರವರು ಅವರ

ಮನೆಗೆ ಕರೆದುಕೊಂಡು ಹೋಗಿರುತ್ತಾರೆ.

ಅವರ ಮನೆ ರಸ್ತೆಯಿಂದ ಸುಮಾರು 4-5 ಕಿಮೀ ದೂರ ಇದ್ದು, ಅಲ್ಲಿ ಕೇವಲ ಎರಡು ಮನೆಗಳು ಮಾತ್ರ ಇರುತ್ತದೆ ಮಹೇಶ್ ರವರು ಅವರ ಬಳಿ ಇದ್ದ ಹಳೆಯ ವಸ್ತುವನ್ನು ತೋರಿಸಿದ್ದು 10 ಲಕ್ಷ ಹಣವನ್ನು ನೀಡುವಂತೆ ಕೇಳಿರುತ್ತಾರೆ, ಆಗ ನಾವು ಇನ್ನೊಂದು ಬಾರಿ ಬರುತ್ತೇವೆಂದು ಅಲ್ಲಿಂದ ವಾಪಸ್ಸು ಬಂದಿರುತ್ತೇವೆ.

ಒಂದು ವಾರದ ನಂತರ ಮಹೇಶ ರವರಿಗೆ ದೂರವಾಣಿ ಕರೆ ಮಾಡಿ ನಾವು ಹಣದ ಸಮೇತ ಬರುತ್ತೇವೆ ನಮಗೆ ನಿಮ್ಮ ಬಳಿ ಇದ್ದ ವಸ್ತುವನ್ನು ನೀಡುತ್ತೀರಾ ಎಂದು ಕೇಳಿದ್ದು ಅವರು ಅದಕ್ಕೆ ಒಪ್ಪಿದ್ದು ಅದರಂತೆ ನಾವು ಅವರ ಮನೆಗೆ ಹೋಗಿದ್ದು, ಅವರಿಗೆ 80 ಸಾವಿರಗಳನ್ನು ಮಹೇಶ್ ರವರಿಗೆ ನೀಡಿದ್ದು, ಅವಾಗ ಮಹೇಶ್ ರವರು 10 ಲಕ್ಷ ಪೂರ್ತಿ ಹಣಬೇಕು ಎಂದು ಕೇಳಿದ್ದು, ನಾನು ಆಗ ನನ್ನ ಒಂದು ಸಹಿ ಮಾಡಿದ ಖಾಲಿ ಚೆಕ್ ಅನ್ನು ಮಹೇಶ್ ರವರಿಗೆ ನೀಡಿರುತ್ತೇನೆ. ಸದರಿ ಚೆಕ್ ನಂಬರ್ 000001 ಆಗಿರುತ್ತದೆ. ಸದರಿ ಸಮಯದಲ್ಲಿ ಒಂದು ಡೈರಿ ಇದ್ದು, ಸದರಿ ಡೈರಿಯಲ್ಲಿ 2 ಚೆಕ್ ಅನ್ನು ಇಟ್ಟುಕೊಂಡು ಬಂದಿದ್ದು, ಅದರಲ್ಲಿ ಒಂದು ಚೆಕ್ ಅನ್ನು ಮಹೇಶ್ ರವರಿಗೆ ನೀಡಿರುತ್ತೇನೆ, ಸದರಿ ಡೈರಿ ಅನ್ನು ಟೇಬಲ್ ಮೇಲೆ ಇಟ್ಟಿದ್ದು ಅವರು ನನಗೆ ಹಳೇ ವಸ್ತುವನ್ನು ನೀಡಿದ ತಕ್ಷಣ ನಾನು ಡೈರಿಯನ್ನು ತೆಗೆದುಕೊಳ್ಳದೇ ಅಲ್ಲಿಂದ ಗಡಿಬಿಡಿಯಲ್ಲಿ ವಾಪಸ್ಸು ಬಂದಿರುತ್ತೇನೆ. ಅವರು ನನಗೆ ವಸ್ತುವನ್ನು ನೀಡುವಾಗ ಅವರ 2 ನೇ ಮಗಳ ಮೊಬೈಲ್ ನಿಂದ ವಿಡಿಯೋ ಮಾಡಿದ್ದು, ಸದರಿ ವಿಡಿಯೋ ನನ್ನ ಮೊಬೈಲ್ ನಲ್ಲಿ ಸಹ ಇದ್ದು, ನನ್ನ ಮೊಬೈಲ್ ಹಾಳಾಗಿರುವುದರಿಂದ ಅದನ್ನು ಒದಗಿಸಲು ಸಾಧ್ಯವಾಗಿರುವುದಿಲ್ಲ.

ಒಂದು ವಾರದ ನಂತರ ಮಹೇಶ್ ರವರಿಗೆ ನಾವು ಕರೆ ಮಾಡಿ ನೀವು ಮೋಸ ಮಾಡುತ್ತಿದ್ದೀರಿ ಎಂದು ಹಾಗೂ ನನ್ನ ಗುರುತಿನ ಚೀಟಿ ತೋರಿಸಿದ ನಂತರ ಅವರು ಭಯ ಪಟ್ಟು ಮಹೇಶ್ ರವರ ಹೆಂಡತಿ ಹಾಗೂ ಅವರ ಮಕ್ಕಳು ನನ್ನ ಬಳಿ ಈ ಬಗ್ಗೆ ಯಾರಿಗೂ ಹೇಳದಂತೆ ಕ್ಷಮೇ ಕೋರಿರುತ್ತಾರೆ. ನಂತರ ಅವರು ನನ್ನ 80 ಸಾವಿರ ಹಣವನ್ನು ಸಹ ವಾಪಸ್ಸು ನೀಡಿರುತ್ತಾರೆ. ನಾನು ಮಾನವೀಯತೇ ದೃಷ್ಟಿಯಿಂದ ಯಾರಿಗೆ ಈ ಬಗ್ಗೆ ಹೇಳಿರುವುದಿಲ್ಲ, ಆದರೆ ನಾನು ಚೆಕ್ ಅನ್ನು ವಾಪಸ್ಸು ಪಡೆದುಕೊಳ್ಳುವುದನ್ನು ಮರೆತು ಹೋಗಿರುತ್ತೇನೆ. ನಂತರ ಸದರಿ 2 ಚೆಕ್ ಅನ್ನು ದುರುಪಯೋಗಪಡಿಸಿಕೊಂಡು ಈ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಕೇವಲ ನಾನು ಒಂದು ಚೆಕ್

ಗೆ ಮಾತ್ರ ಸಹಿ ಮಾಡಿರುತ್ತೇನೆ.

ಮುಂದುವರೆದ ಮುಖ್ಯ ವಿಚಾರಣೆ ಸಮಾಯವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ನ ರಾ ಪುರ.